O.S. No. 39-2018
P.W. - 1

**ದಿನಾಂಕಃ 04-12-2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

***ಮುಂದುವರೆದ ಪಾಟೀ ಸವಾಲುಃ- ಶ್ರೀ ಜಿ ಎ ಜೆ., ಮಾನ್ಯ ವಕೀಲರಿಂದ ಪ್ರತಿವಾದಿಯ ಪರವಾಗಿಃ -***

ಸಾಕ್ಷಿಗೆ ಈಗ ಸದರಿ Vigilence ನವರು ಪಟ್ಟಿಮಾಡಿಕೊಂಡು ತೆಗೆದುಕೊಂಡಿದಂತ ದಾಖಲೆಗಳು ಈ ಎಲ್ಲಿರುತ್ತವೆ ಎಂದು ಕೇಳಿದ್ದಕ್ಕೆ ಸಾಕ್ಷಿ ಕೆಲವೊಂದು ಮುಖ್ಯ ವಾದ ದಾಖಲೆಗಳು Vigilence ನವರ ಹತ್ತಿರ ಇದ್ದು, ಉಳಿದ ದಾಖಲೆಗಳನ್ನು ಅವರು ಸಂಬಂಧಪಟ್ಟ ಶಾಖೆಗೆ ಹಿಂದಿರುಗಿಸಿ ಕೊಟ್ಟಿರುವುದಾಗಿ ಹೇಳುತ್ತಾರೆ. ಸಾಕ್ಷಿಗೆ ಈಗ ಸದರಿ ವಿಜಿಲೆನ್ಸನವರು ತಮ್ಮ ಹತ್ತಿರ ಯಾವ ಯಾವ ಮುಖ್ಯವಾದ ದಾಖಲೆಗಳನ್ನು ಇಟ್ಟುಕೊಂಡಿರುತ್ತಾರೆ ಹಾಗೂ ಸಂಬಂಧ ಪಟ್ಟ ಶಾಖೆಗೆ ಯಾವ ಯಾವ ದಾಖಲೆಗಳನ್ನು ಹಿಂದಿರುಗಿಸಿರುತ್ತಾರೆ ಎಂದು ಕೇಳಿದ್ದಕ್ಕೆ ಸಾಕ್ಷಿ ತಮಗೆ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ಈಗ ನಿಪಿ-1 ರ ಎಲ್ಲಾ ಒಕ್ಕಣೆಗಳ ಮಾಹಿತಿ ನಿಮಗೆ ಇರುತ್ತದೆಯಾ ಎಂದು ಕೇಳಿದ್ದಕ್ಕೆ ಸಾಕ್ಷಿ ಇರುವುದಾಗಿ ಹೇಳುತ್ತಾರೆ. ಸಾಕ್ಷಿಗೆ ಈಗ ನಿಪಿ-1 ರ ಭಾಗ 2 ರ ಕ್ರಮ ಸಂಖ್ಯೆ 7 ರಲ್ಲಿ ದಿನಾಂಕಃ 18-08-2010 ರಂದು ವಿಚಕ್ಷಣದಳದ ಅಧಿಕಾರಿಗಳು ಈ ಹಿಂದೆ ವಿಭಾಗ ಕಛೇರಿಯಿಂದ ವಶಪಡಿಸಿಕೊಳ್ಳಲಾದ ಎಲ್ಲಾ ಮೂಲ ದಾಖಲಾತಿಗಳನ್ನು ವಿಭಾಗ ಕಛೇರಿಯ ವಶಕ್ಕೆ ನೀಡಿರುತ್ತಾರೆ ಎಂದು ನಮೂದು ಮಾಡಿರುತ್ತಾರೆ ಎಂದು ಹೇಳಿದ್ದಕ್ಕೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ಸಾಕ್ಷಿಗೆ ಈಗ ಸದರಿ ದಾಖಲೆಗಳು ನಿಮ್ಮ ಕಛೇರಿಯಲ್ಲಿರುತ್ತವೆ ಎಂದು ಹೇಳಿದ್ದಕ್ಕೆ ಸಾಕ್ಷಿ ಇರುವುದಾಗಿ ಹೇಳುತ್ತಾರೆ. ಸಾಕ್ಷಿಗೆ ಈಗ ಸದರಿ ವಿಚಕ್ಷಣದಳದವರು ತಾವು ಯಾವ ಯಾವ ದಾಖಲೆಗಳನ್ನು

ತೆಗೆದುಕೊಂಡಿರುತ್ತಾರೆಂದು ವಿವರ ಪಟ್ಟಿ ಮಾಡಿದ್ದು ಆ ವಿವರ ಪಟ್ಟಿಯನ್ನು ಈ ನ್ಯಾಯಾಲಯಕ್ಕೆ ಕೊಟ್ಟಿರುತ್ತೀರಾ ಎಂದು ಹೇಳಿದ್ದಕ್ಕೆ ಸಾಕ್ಷಿ ಇಲ್ಲವೆಂದು ಹೇಳುತ್ತಾರೆ. ಸಾಕ್ಷಿಗೆ ಈಗ ಸದರಿ ವಿಚಕ್ಷಣದಳದವರು ತಮ್ಮ ತನಿಖೆ ವೇಳೆಯಲ್ಲಿ ಸಿಬ್ಬಂದಿಯವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತಾರಾ ಎಂದು ಕೇಳಿದ್ದಕ್ಕೆ ಸಾಕ್ಷಿ ಪಡೆದುಕೊಂಡಿರುವುದಾಗಿ ಹೇಳುತ್ತಾರೆ. ಸದರಿ ದಳದವರು ಸುಮಾರು 15 ಜನ ಸಿಬ್ಬಂದಿಯವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತಾರೆ. ಸದರಿ ಸಿಬ್ಬಂದಿಯವರ ಹೇಳಿಕೆಗಳನ್ನು ನಾನು ಪ್ರಸ್ತುತ ಪ್ರಕರಣದಲ್ಲಿ ಹಾಜರು ಪಡಿಸಿರುವುದಿಲ್ಲ. ಸಾಕ್ಷಿ ಮುಂದುವರೆದು, ಸದರಿ ಹೇಳಿಕೆಗಳನ್ನು ಸದರಿ ವಿಚಕ್ಷಣದಳದವರ ಹತ್ತಿರ ಇರುವುದಾಗಿ ಹೇಳುತ್ತಾರೆ. ಸಾಕ್ಷಿಗೆ ಈಗ ಸದರಿ 15 ಸಿಬ್ಬಂದಿಗಳು ಯಾರಾಗಿರುತ್ತಾರೆ ಎಂದು ಕೇಳಿದ್ದಕ್ಕೆ ಸಾಕ್ಷಿ 1) Kallappa-Executive Engneer, 2) Ali Hussain- Asst. E.E., 3) Abid Hussaain- Accounts Officer, 4) Gangappa-Accounts Officer, 5)Rajashekar-Asst.Engneer, 6) Basavaraj Gouda-SDC, 7) Nagaraj-J.E., 8)Shivakumar-Asst. Engneer, ಎಂದು ಹೇಳುತ್ತಾರೆ ಹಾಗೂ ಇನ್ನೂಳಿದ ಸಿಬ್ಬಂದಿಯವರ ಹೆಸರುಗಳು ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಸಾಕ್ಷಿಗೆ ಈಗ ಸದರಿ ಕಲ್ಲಪ್ಪ ಹಾಗೂ ಉಳಿದ ಸಿಬ್ಬಂದಿಯವರು ಯಾವ ಅವಧಿಯಲ್ಲಿ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿದ್ದರು ಎಂದು ಕೇಳಿದ್ದಕ್ಕೆ ಸಾಕ್ಷಿ ಸದರಿ ಕಲ್ಲಪ್ಪ ಇವರು ನವೆಂಬರ -2007 ರಿಂದ ಜನವರಿ -2008 ವರಗೆ Exectutive Engneer ಎಂದು ಕರ್ತ್ಯವವನ್ನು ನಿರ್ವಹಿಸಿರುವುದಾಗಿ, ಅಬಿದ ಹುಸೇನ ಇವರು 2007 ರಿಂದ 2009 ವರೆಗೆ ಆಡಿಟ್ ಆಫೀಸರ ಎಂದು, ಗಂಗಪ್ಪ ಇವರು ಸನ್ 2006-07 ರಲ್ಲಿ ಆಡಿಟ್ ಆಫೀಸರ ಎಂದು, ಅಲಿ ಹುಸೇನ ಇವರು 2006 ರಿಂದ 2008 ವರೆಗೆ

Asst. Executive Engneer, RDS ಉಪ ವಿಭಾಗದಲ್ಲಿ, ಸದರಿ ಶಿವಕುಮಾರ ಇವರು ಟೆಕಿನಿಕಲ್ ಶಾಖೆಯಲ್ಲಿ ಕರ್ತವವನ್ನು ನಿರ್ವಹಿಸಿರುವುದಾಗಿ ಹೇಳುತ್ತಾರೆ. ಸನ್ 2006 ರಿಂದ 2009 ವರೆಗೆ ಸಬ್ ಡಿವಿಜಿನ ನಂಬರ 2 ರಲ್ಲಿ ಸದರಿ ನಾಗರಾಜ ಜೆ. ಇ., ಎಂದು ಕರ್ತವ್ಯವನ್ನು ನಿರ್ವಹಿಸುತ್ತಿದ್ದರು. ಸದರಿ ಬಸವರಾಜ ಗೌಡ ಇವರು ಡಿವಿಜಿನಲ್ ಲೆಕ್ಕ ಶಾಖೆಯಲ್ಲಿ ಸನ್ 2006 ರಿಂದ 2011 ವರೆಗೆ ತಮ್ಮ ಕರ್ತವ್ಯವನ್ನು ನಿರ್ವಹಿಸಿರುತ್ತಾರೆ. ಸಾಕ್ಷಿಗೆ ಈಗ ಸನ್ 2006 ರಿಂದ 2010 ವರೆಗೆ ಅಕೌಂಟ್ಸ ಶಾಖೆಯಲ್ಲಿ ಸಂಪೂರ್ಣ ವಾದ ಸಿಬ್ಬಂದಿ ಇತ್ತು ಎಂದು ಹೇಳಿದ್ದಕ್ಕೆ ಸಾಕ್ಷಿ ಇಬ್ಬರು ಸಿಬ್ಬಂದಿಯವರು ಕಮ್ಮಿ ಇದ್ದರು ಎಂದು ಹೇಳುತ್ತಾರೆ. ಯಾವುದೇ ಬಿಲ್ ಪಾಸ ಆಗಬೇಕಾದರೆ Accounts Superitendent ಇವರು ಎಲ್ಲ ಬಿಲ್ಲಗಳನು ಪರೀಶಿಲನೆ ಮಾಡುತ್ತಾರೆ ಎಂದರೆ ಸರಿ . ಸಾಮಾನ್ಯ ವಾಗಿ ಚೆಕ್‌ಗಳ ಮೇಲೆ ಸದರಿ Accounts Superitendent ಇವರ Initial ಇರುತ್ತದೆ ಎಂದು ಹೇಳಿದ್ದಕ್ಕೆ ಸಾಕ್ಷಿ ಇಲ್ಲವೆಂದು ಹೇಳುತ್ತಾರೆ. ಆದರೆ, ಅವರು ಕೌಂಟರ ಸಹಿಯನ್ನು ಮಾಡುವುದಾಗಿ ಹೇಳುತ್ತಾರೆ. ಸಾಕ್ಷಿಗೆ ಈಗ ಯಾವಾಗ Accounts Superitendent ಇವರು ಚೆಕ್‌ಮೇಲೆ ತಮ್ಮ ಕೌಂಟರ ಸಹಿಯನ್ನು ಹಾಕುತ್ತಾರೋ ಅಂದರೆ ಅಕೌಂಟ್ಸ ಸರಿಯಾಗಿರುತ್ತದೆ ಎಂದು ಅರ್ಥ ಎಂದು ಹೇಳಿದ್ದಕ್ಕೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ಸದರಿ Accounts Superitendent ಇವರ ಕೌಂಟರ ಸಹಿ ಇರದಿದ್ದರೆ Drawing and Disbursing of Division Officer ಇವರು ಚೆಕ್‌ಗಳನ್ನು ಇಶ್ಯೂ ಮಾಡುವುದಿಲ್ಲ ಎಂದು ಹೇಳಿದ್ದಕ್ಕೆ ಸಾಕ್ಷಿ ಹೌದು ಎಂದು ಹೇಳುತ್ತಾರೆ. ಸಾಕ್ಷಿಗೆ ಈಗ ಸನ್ 2006 ರಿಂದ 2010 ವರೆಗೆ ಅಕೌಂಟ್ಸ ಸೆಕ್ಷನಲ್ಲಿ ಎಷ್ಟು ಜನ ಸಿಂಬ್ಬಂದಿ ಇದ್ದರು ಅವರಗಳು ಸದರಿ ಅವಧಿಗಾದಂತೆ ತಮ್ಮ ಸಂಬಂಳವನ್ನು ಡ್ರಾ ಮಾಡಿಕೊಂಡಿರುತ್ತಾರೆ ಎಂದು ಹೇಳಿದ್ದಕ್ಕೆ ಸಾಕ್ಷಿ ಹೌದು ಎಂದು

ಹೇಳುತ್ತಾರೆ.  ಸಾಕ್ಷಿಗೆ ಈಗ ನಿಪಿ-1 ನ್ನು ಸದರಿ ವಿಚಕ್ಷಣದಳವರು ಸದರಿ ಸಾಕ್ಷಿಗಳ ಮೌಖಿಕ ಹೇಳಿಕೆಗಳ ಆಧಾರದ  ಮೇಲೆ ಸಲ್ಲಿಸಿರುತ್ತಾರೆ ಎಂದು ಹೇಳಿದ್ದಕ್ಕೆ ಸಾಕ್ಷಿ ಸದರಿ ದಳವರು ಸದರಿ ಸಿಬ್ಬಂದಿಯವರನ್ನು ಬೆಂಗಳೂರಿಗೆ ಕರೆಸಿಕೊಂಡು ಮೌಖಿಕ ಹಾಗೂ ಲಿಖಿತ ಹೇಳಿಕೆಗಳನ್ನು ಪಡೆದುಕೊಂಡಿರುವುದಾಗಿ ಹೇಳುತ್ತಾರೆ.

( ಮುಂದುವರೆದ ಪಾಟೀ ಸವಾಲಿಗೆ  ವೇಳೆ ಕೋರಿದ್ದರಿಂದ ಮುಂದೂಡಲಾಯಿತು.)

**( ತೆರೆದ ನ್ಯಾಯಾಲಯದಲ್ಲಿ  ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನೆಯ ಮೇರೆಗೆ ಬೆರಳಚ್ಚುಗಾರರು ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿಗೆ ಓದಿ ತಿಳಿಸಿ ಹೇಳಿದಾಗ ಸಾಕ್ಷಿ ಸರಿ ಇದೆ ಅಂತಾ ಒಪ್ಪಿ ಕೊಂಡಿರುತ್ತಾರೆ.)**

**2 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ರಾಯಚೂರು.**